**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನೇ ಅಧಿವೇಶನ**

# ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–03)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು 24ನೇ ಮಾರ್ಚ್ 2023ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 13ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ 13ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಎತ್ತರದ ಕಟ್ಟಡವನ್ನು ನಿರ್ಮಾಣ ಮಾಡಲು ಉದ್ದೇಶಿಸುವ ಯಾರೇ ವ್ಯಕ್ತಿಯು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

(4) ಅಗ್ನಿಶಾಮಕ ಮತ್ತು ಜೀವ ಸುರಕ್ಷತೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಎತ್ತರದ ಕಟ್ಟಡಗಳ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ನಿರಾಕ್ಷೇಪಣಾ ಪತ್ರವನ್ನು ನೀಡುವಾಗ, ಅದು ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂಗ್ರಹಿಸತಕ್ಕದ್ದು.

**ವಿವರಣೆ:** "ಎತ್ತರದ ಕಟ್ಟಡ" ಎಂದರೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರಲ್ಲಿ ಪರಿಭಾಷಿಸಿದಂತೆ ಅದರ ಅಧಿಭೋಗದಾರಿಕೆಯನ್ನು ಲೆಕ್ಕಿಸದೆ 21 ಮೀಟರುಗಳ ಅಥವಾ ಅದಕ್ಕಿಂತ ಹೆಚ್ಚಿನ ಎತ್ತರದ ಕಟ್ಟಡ."

**3. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಅಗ್ನಿಶಾಮಕ ಮತ್ತು ಜೀವಸುರಕ್ಷತೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ಎತ್ತರದ ಕಟ್ಟಡ ನಿರ್ಮಾಣಕ್ಕಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದಕ್ಕೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಅಗ್ನಿಶಾಮಕದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ದಿನಾಂಕ:24.03.2023ರಂದು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನಪತ್ರ**

| | |
|---|---|
| **ಖಂಡ-2** | ಸೇರಿಸಲು ಉದ್ದೇಶಿಸಿರುವ13ನೇ ಪ್ರಕರಣದ (4)ನೇ ಉಪಪ್ರಕರಣವು ಎತ್ತರದ ಕಟ್ಟಡ ನಿರ್ಮಾಣಕ್ಕಾಗಿ ನಿರಾಕ್ಷೇಪಣಾ ಪತ್ರವನ್ನು ನೀಡುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ನಿಗದಿಪಡಿಸಬೇಕಾದ ಶುಲ್ಕದ ಮೊತ್ತದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 77ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಅಗ್ನಿಶಾಮಕ ಮತ್ತು ಜೀವಸುರಕ್ಷತೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ಎತ್ತರದ ಕಟ್ಟಡ ನಿರ್ಮಾಣಕ್ಕಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದಕ್ಕೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಅಗ್ನಿಶಾಮಕದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ದಿನಾಂಕ:24.03.2023ರಂದು ಪ್ರಖ್ಯಾಪಿಸಲಾಗಿತ್ತು.

**ಡಾ|| ಜಿ. ಪರಮೇಶ್ವರ**
ಗೃಹಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964ರ

## (1964ರ ಕರ್ನಾಟಕಅಧಿನಿಯಮ ಸಂಖ್ಯೆ 42) ಉದ್ಧೃತಭಾಗ

**X X XX XX**

**13. ಪ್ರತಿಬಂಧಕ ಕ್ರಮಗಳು.–** (1) ರಾಜ್ಯ ಸರ್ಕಾರದವರು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ, ಯಾವುದೇ ಪ್ರದೇಶದಲ್ಲಿ ಯಾವುದೇ ಆವರಣಗಳ ಅಥವಾ ತನ್ನ ಅಭಿಪ್ರಾಯದಲ್ಲಿ ಬೆಂಕಿಯ ಅಪಾಯವನ್ನುಂಟು ಮಾಡುವ ಸಂಭವವಿರುವಂಥ ಉದ್ದೇಶಗಳಿಗಾಗಿ ಉಪಯೋಗಿಸಿದ ಯಾವುದೇ ವರ್ಗದ ಆವರಣಗಳ ಒಡೆಯರನ್ನು ಅಥವಾ ಅಧಿಭೋಗದಾರರನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಅಗತ್ಯಪಡಿಸಬಹುದು.

(2) (1) ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ ನಿರ್ದೇಶಕನಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ದಳದ ಯಾವನೆ, ಅಧಿಕಾರಿಗೆ ಬೆಂಕಿಯ ಅಪಾಯವನ್ನುಂಟು ಮಾಡುವ ಸಂಭವವಿರುವ ವಸ್ತುಗಳನ್ನು ಅಥವಾ ಸರಕುಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ಮತ್ತು ಹಾಗೆ ಮಾಡಲು ಆ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದಲ್ಲಿ, ನಿರ್ದೇಶಕನು ಅಥವಾ ಅಂಥ ಅಧಿಕಾರಿಯು ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಮನವಿ ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅಂಥ ವಸ್ತುಗಳನ್ನು ಅಥವಾ ಸರಕುಗಳನ್ನು ಅಭಿಗ್ರಹಿಸಬಹುದು, ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಸ್ಥಳಾಂತರಿಸಬಹುದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 17ನೇ ಜುಲೈ, 2023

**KARNATAKA LEGISLATIVE COUNCIL**
**ONE HUNDRED AND FIFTIETH SESSION**

# THE KARNATAKA FIRE FORCE (AMENDMENT) BILL, 2023

**(LA Bill No. 03 of 2023)**

**(As passed by the Karnataka Legislative Assembly)**

A Bill further to amend the Karnataka Fire Force Act, 1964 (Karnataka Act 42 of 1964).

Whereas it is expedient further to amend the Karnataka Fire Force Act, 1964 (Karnataka Act 42 of 1964), for the purposes hereinafter appearing;

Be it enacted by the Karnataka State Legislature in the Seventy fourth year of the Republic of India as follows:-

**1. Short title and commencement.-**(1) This Act may be called the Karnataka Fire Force (Amendment) Act, 2023.

(2) It shall be deemed to have come into force with effect from 24th March 2023.

**2. Amendment of Section 13.-**In section 13 of the Karnataka Fire Force Act, 1964 (Karnataka Act 42 of 1964) after sub-section (2), the following shall be inserted, namely:-

"(3) Any person proposing to construct a high rise building shall obtain a No Objection Certificate from the Karnataka State Fire and Emergency Services department.

(4) Subject to the provisions of the National Building Code 2016 relating to Fire and life safety, while issuing a No objection certificate for construction of a high rise building, the Karnataka State Fire and Emergency Services department shall follow such procedure and collect such amount of fee as may be prescribed.

**Explanation: "**A high rise building" means a building of 21 meters or above in height irrespective of its occupancy as defined in the National Building Code 2016."

**3. Repeal and savings.-** (1) The Karnataka Fire Force (Amendment) Ordinance, 2023 (Karnataka Ordinance No 01 of 2023) is hereby repealed.

(2) Notwithstanding such repeal anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

## STATEMENT OF OBJECTS AND REASONS

## (As appended to at the time of introduction)

It is considered necessary further to amend the Karnataka Fire Force Act, 1964 (Karnataka Act 42 of 1964) to make a provision for obtaining a No Objection Certificate to construct a high rise building from the Karnataka State Fire and Emergency Services department subject to the provisions of the National Building Code 2016 relating to Fire and life safety.

As the matter was urgent and both Houses of the Karnataka state legislature were not in a session, the Karnataka Fire Force (Amendment) Ordinance 2023 (Karnataka Ordinance No. 01 of 2023) was promulgated on 24.03.2023.

This Bill seeks to replace the said Ordinance.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause-2 | Sub-section (4) of section 13 sought to be inserted empowers the State Government to make rules regarding the procedure to be followed and the amount of fee to be collected while issuing a No Objection Certificate for construction of a high rise building. |

The proposed delegation of legislative power is normal in character.

**Explanatory Statement as required by sub-rule (1) of rule 77 of the Rules of procedure and conduct of Business in the Karnataka Legislative Council.**

It is considered necessary further to amend the Karnataka Fire Force Act, 1964 (Karnataka Act 42 of 1964) to make a provision for obtaining a No Objection Certificate to construct a high rise building from the Karnataka State Fire and Emergency Services department subject to the provisions of the National Building Code 2016 relating to Fire and life safety.

As the matter was urgent and both houses of the Karnataka state legislature were not in a session, the Karnataka Fire Force (Amendment) Ordinance 2023 (Karnataka Ordinance No. 01 of 2023) was promulgated on 24.03.2023 to achieve the above object.

**Dr. G. PARAMESHWARA**
Minister for Home

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE KARNATAKA FIRE FORCE ACT, 1964
## (KARNATAKA ACT 42 OF 1964)

**XX** **XX** **XX**

**13. Preventive measures.—**(1) The State Government may by notification in the official Gazette, require owners or occupiers of premises in any area or any class of premises used for purposes which in its opinion are likely to cause a risk of fire, to take such precautions as may be specified in such notification.

(2) Where a notification has been issued under sub-section (1), it shall be lawful for the Director or any officer of the Force authorised by the State Government in this behalf to direct the removal of objects or goods likely to cause a risk of fire, to a place of safety; and on failure of the owner or occupier to do so, the Director or such officer may, after giving the owner or occupier a reasonable opportunity of making representation, seize, detain or remove such objects or goods.

**XX** **XX** **XX**

Govt. Press, Vikasa Soudha, Bengaluru, 17th July, 2023, P7, W.D. , Copies 300